# ಸತ್‌ಲೋಕದ ಮಹಾರಾಜ!

ಎಲ್ಲಿ ಅಡಗಿ ಕುಳಿತಿದ್ದಾನೆ ಎಂದು ಖಚಿತವಾಗಿ ಗೊತ್ತಿರುವ ಒಬ್ಬ ವ್ಯಕ್ತಿಯನ್ನು ಬಂಧಿಸಲು ಪೊಲೀಸರಿಗೆ ಹೆಚ್ಚೆಂದರೆ ಎಷ್ಟು ಖರ್ಚಾಗಬಹುದು? ಖಂಡಿತಾ ಅದೊಂದು ಜುಜುಬಿ ಮೊತ್ತವೇ ಆಗಿರುತ್ತದೆ. ಆದರೆ ಹರಿಯಾಣದ ಈ ರಾಮ್‌ಪಾಲ್ ಜೀ ಮಹಾರಾಜ್‌ರನ್ನು ಬಂಧಿಸಲು ಸರ್ಕಾರಕ್ಕೆ ತಗಲಿದ ಖರ್ಚು 26 ಕೋಟಿ ರೂಪಾಯಿ! ಈತನನ್ನು ಹುಡುಕಿ ಬಂಧಿಸಲು ಹರಿಯಾಣ ಸರ್ಕಾರ 15.43 ಕೋಟಿ ರೂಪಾಯಿ, ಪಂಜಾಬ್ ಸರ್ಕಾರ 4.34 ಕೋಟಿ ರೂಪಾಯಿ, ಚಂಡೀಗಢ ಆಡಳಿತ 3.29 ಕೋಟಿ ರೂಪಾಯಿ ಮತ್ತು ಕೇಂದ್ರ ಸರ್ಕಾರ 3.55 ಕೋಟಿ ರೂಪಾಯಿ ಖರ್ಚು ಮಾಡಿದೆ!

ಒಬ್ಬ ಸ್ವಾಮೀಜಿಯ ಆಶ್ರಮದಲ್ಲಿ ಏನೇನೆಲ್ಲ ಇರಬಹುದು? ರಾಮ್‌ಪಾಲ್ ಮಹಾರಾಜ್‌ರ ಸತ್‌ಲೋಕ ಆಶ್ರಮಕ್ಕೆ ಜೆಸಿಬಿ ಯಂತ್ರ ತಂದು ಶಸ್ತ್ರಸಜ್ಜಿತರಾಗಿ ನುಗ್ಗಿದ ಪೊಲೀಸರಿಗೆ ಅಲ್ಲಿ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳು, ಮದ್ದುಗುಂಡುಗಳು, ರೈಫಲ್ಸ್, ಗನ್, ಕಾಡತೂಸುಗಳು, ಪೆಟ್ರೋಲ್ ಬಾಂಬ್‌ಗಳು, ಆ್ಯಸಿಡ್ ಸಿರಿಂಜ್‌ಗಳು, ಸಾವಿರಾರು ಒಳ ಉಡುಪುಗಳು, ಲಾಠಿಗಳು, ನೂರಾರು ಹೆಲ್ಮೆಟ್, ಆ್ಯಸಿಡ್ ಬಾಟಲಿಗಳು, ಬುಲೆಟ್‌ಪ್ರೂಫ್ ಜಾಕೆಟ್, ಕಮಾಂಡೊ ಸಮವಸ್ತ್ರಗಳು, 30 ಸಾವಿರ ಬ್ಲಾಂಕೆಟ್ ಮತ್ತು ಕಾಂಡೋಮ್‌ಗಳು ಸಿಕ್ಕಿವೆ!

ಇದು ಇವತ್ತಿನ 'ಮಾಡರ್ನ್ ಆಧ್ಯಾತ್ಮ' ಇರಬಹುದು! ಹಿಸ್ಸಾರ್‌ನ ಬರ್ವಾಲಾದಲ್ಲಿರುವ 12 ಎಕರೆ ವಿಸ್ತೀರ್ಣದ ಆಶ್ರಮಕ್ಕೆ 50 ಅಡಿ ಎತ್ತರದ ಗೋಡೆಗಳಿದ್ದವು! ಐದು ಮಹಡಿಗಳುಳ್ಳ, ಸಂಪೂರ್ಣ ಹವಾನಿಯಂತ್ರಿತ 28 ಐಶಾರಾಮಿ ಕೋಣೆಗಳ ಆಶ್ರಮದಲ್ಲಿ ಚಿನ್ನಲೇಪಿತ ಕನ್ನಡಕಗಳನ್ನು ಧರಿಸಿಕೊಂಡು ಈ ಸಂತರು ಸರಳವಾಗಿ ಜೀವಿಸುತ್ತಿದ್ದರು! ಒಂದು ವಾರದ ಜಾಲಾಟದಲ್ಲಿ ಪೊಲೀಸರಿಗೆ, ಆಶ್ರಮದೊಳಗೆ ಆರು ಬೃಹತ್ ಜನರೇಟರ್‌ಗಳು, ಬುಲೆಟ್‌ಪ್ರೂಫ್ ವಾಹನಗಳು, ಆಯಿಲ್ ಟ್ಯಾಂಕರ್‌ಗಳೂ ಸಿಕ್ಕಿವೆ!

ಈ ಸಂತನ ವಿರುದ್ಧ ದಾಖಲಾಗಿದ್ದ ಒಂದು ಕ್ರಿಮಿನಲ್ ಮೊಕದ್ದಮೆಯ ವಿಚಾರಣೆಗೆ ಹಾಜರಾಗಲು ಕೋರ್ಟ್ ನೋಟಿಸ್ ಕಳಿಸಿದರೆ ಈತ ಕ್ಯಾರೇ ಎನ್ನಲಿಲ್ಲ. ಒಟ್ಟು 42 ಸಲ ಕೋರ್ಟ್ ಈತನಿಗೆ ಸಮನ್ಸ್ ಕಳಿಸಿದೆಯಂತೆ! ತಮ್ಮ ಗುರೂಜಿ ಎಲ್ಲ ಕೋರ್ಟ್‌ಗಳಿಗಿಂತಲೂ ಎತ್ತರದವರು ಎಂದು ಅವರ ಸಹಸ್ರಾರು ಭಕ್ತರು ತಿಳಿದುಕೊಂಡಿದ್ದರು. ಆದರೆ ಈ ಗುರೂಜಿಗೆ ದೇಶದ ಕಾನೂನು, ಸಂವಿಧಾನ , ನ್ಯಾಯಾಂಗ ವ್ಯವಸ್ಥೆಯ ಬಗ್ಗೆ ತಿಳುವಳಿಕೆ ಇರಲಿಲ್ಲವೆ.. ಎನ್ನುವುದು ಮಹತ್ವದ ಪ್ರಶ್ನೆ. ಪೊಲೀಸರು ಒಳನುಗ್ಗಿದಾಗ ಸಿಟ್ಟಿಗೆದ್ದ ಭಕ್ತರ ದಾಂಧಲೆಯಲ್ಲಿ ಆರು ಜನ ಸತ್ತು 200 ಜನ ಆಸ್ಪತ್ರೆ ಸೇರಬೇಕಾಯಿತು.

ನಮ್ಮಲ್ಲಿ ಈಗ ಅತ್ಯಂತ ಲಾಭದಾಯಕ ದಂಧೆ ಎಂದರೆ ಆಶ್ರಮಗಳನ್ನು ನಡೆಸುವುದು. ಅಸಾರಾಮ್ ಬಾಪು ಎಂಬ ಕೋಟ್ಯಧಿಪತಿ ಬಾಬಾ ಜೈಲುಪಾಲಾಗಿದ್ದು ಕಣ್ಣ ಮುಂದೆಯೇ ಇದೆ. ಆತನ ಬಳಿಕ ಅತಿದೊಡ್ಡ ಬೇಟೆ ಎಂದರೆ ಈ ರಾಮ್‌ಪಾಲ್ ಮಹಾರಾಜ್. ಸೋನಿಪತ್‌ನ ರೈತ ಕುಟುಂಬದಲ್ಲಿ ಜನಿಸಿ (ಬರ್ತ್‌ಡೇ 8/9/1951) ಎಂಜಿನಿಯರಿಂಗ್ ಡಿಪ್ಲೊಮಾ ಮುಗಿಸಿ, 18 ವರ್ಷ ಕಾಲ ಹರಿಯಾಣದ ನೀರಾವರಿ ಇಲಾಖೆಯಲ್ಲಿ ಜೂನಿಯರ್ ಎಂಜಿನಿಯರ್ ಆಗಿ ಕೆಲಸ ಮಾಡಿದ್ದನೀತ. ಕೆಲಸ ಬಿಟ್ಟ ಬಳಿಕದ ಆಧ್ಯಾತ್ಮದ ಬಿಸಿನೆಸ್ ಸಖತ್ತಾಗಿ ಕೈಹಿಡಿಯಿತು. ಸಂತ ಕಬೀರರ ತತ್ವಗಳ ಬಗ್ಗೆ ಪ್ರಚಾರ ಮಾಡುತ್ತಿದ್ದುದು ಸಮಾಜದ ಕೆಳವರ್ಗದ ಜನರನ್ನು ಹೆಚ್ಚಾಗಿ ಸೆಳೆಯಿತು. ಈ ಮಹಾರಾಜನಿಗಾಗಿ ಜೀವ ಕೊಡಲೂ ಹೆದರದ ಸಹಸ್ರಾರು ಭಕ್ತರಿದ್ದರು.



ಈ ಮಹಾರಾಜರ ಒಟ್ಟು ಆಸ್ತಿ ಮೊತ್ತ 1000 ಕೋಟಿ ರೂಪಾಯಿ ಎನ್ನಲಾಗಿದೆ. ಈ ಆಶ್ರಮದ ಪಕ್ಕದಲ್ಲೇ ಇನ್ನೊಂದು ಆರು ಎಕರೆ ಜಮೀನು, ದೌಲತ್‌ಪುರ ರಸ್ತೆಯಲ್ಲಿ 52 ಎಕರೆ ಜಮೀನು, ಮಧ್ಯಪ್ರದೇಶದ ಬೆಟೂರ್‌ನಲ್ಲಿ 70 ಎಕರೆ ವಿಸ್ತೀರ್ಣದಲ್ಲಿ ಇನ್ನೊಂದು ಐಶಾರಾಮಿ ಆಶ್ರಮ– ಇವು ಸದ್ಯಕ್ಕೆ ಗೊತ್ತಾದ ಆಸ್ತಿಗಳು! ಆಶ್ರಮದಲ್ಲಿ ವಶಕ್ಕೆ ಪಡೆದ ಹಲವಾರು ಲಾಕರ್‌ಗಳನ್ನು ಇನ್ನಷ್ಟೆ ಬಿಡಿಸಿ ನೋಡಬೇಕಿದೆ.

ಧರ್ಮಕೇಂದ್ರಗಳ ಬಗ್ಗೆ ಅಪಾರ ಭಕ್ತಿ ಪ್ರದರ್ಶಿಸುವ ಬಿಜೆಪಿ ಸರ್ಕಾರ, ಇಷ್ಟೊಂದು ಜನಪ್ರಿಯ ಸ್ವಾಮೀಜಿಯನ್ನು ರಿಸ್ಕ್ ತೆಗೆದುಕೊಂಡು ಮಟ್ಟ ಹಾಕಲು ನಿರ್ಧರಿಸಿದ್ದೇಕೆ.. ಎನ್ನುವುದೂ ಕುತೂಹಲಕರ ಪ್ರಶ್ನೆ. ಒಂದು ಮೂಲದ ಪ್ರಕಾರ, ಆರ್ಯ ಸಮಾಜ ಮತ್ತು ಆರೆಸ್ಸೆಸ್ ಭಕ್ತರ ಒತ್ತಡವೇ ಇದಕ್ಕೆ ಕಾರಣ! ಆರ್ಯ ಸಮಾಜದ ಜತೆಗಿನ ಈತನ ಭಿನ್ನಮತ ಮತ್ತು ಘರ್ಷಣೆ 2006ರಷ್ಟು ಹಿಂದಿನದ್ದು. ಆರ್ಯ ಸಮಾಜದ ಸ್ಥಾಪಕ ದಯಾನಂದ ಸರಸ್ವತಿ ಬರೆದ 'ಸತ್ಯಾರ್ಥ ಪ್ರಕಾಶ' ಪುಸ್ತಕದ ಬಗ್ಗೆ ರಾಮ್‌ಪಾಲ್ ಮಹಾರಾಜ್ ಅತ್ಯುಗ್ರ ಟೀಕೆ ಮಾಡುತ್ತಿದ್ದ. ಆರ್ಯಸಮಾಜ ಭಾರತೀಯರ ಮೇಲೆ ಏಕಸಂಸ್ಕೃತಿಯನ್ನು ಹೇರುತ್ತಿದೆ ಎನ್ನುವುದು ರಾಮ್‌ಪಾಲ್ ಸಿಟ್ಟಿಗೆ ಕಾರಣ. ಆಗಲೇ ಉಭಯಗುಂಪುಗಳ ಮಧ್ಯೆ ಹೊಡೆದಾಟ ನಡೆದು ಒಬ್ಬ ಸತ್ತು 59 ಜನ ಗಾಯಗೊಂಡಿದ್ದರು. ಸರ್ಕಾರ ಈತನನ್ನು ಜೈಲಿಗೆ ತಳ್ಳಿತ್ತು. 2008ರಲ್ಲಿ ಜೈಲಿನಿಂದ ಹೊರಬಂದ ಬಳಿಕ ಈ ಮಹಾರಾಜ್, ಹಿಸ್ಸಾರ್‌ಗೆ ತನ್ನ ಆಶ್ರಮ ಸ್ಥಳಾಂತರ ಮಾಡಿದ್ದ.

ಸದ್ಯಕ್ಕಂತೂ ವಿದ್ಯುತ್ ಬೆಳಕು ಮತ್ತು ಫ್ಯಾನ್ ಇಲ್ಲದ ಕೋಣೆಯಲ್ಲಿ ಈತ ದಾಲ್ ರೋಟಿ ತಿನ್ನುತ್ತಿದ್ದಾನೆ. ಡಿಸೆಂಬರ್ ಕೊನೆಯವರೆಗೂ ಕಸ್ಟಡಿಯ ಅವಧಿ ವಿಸ್ತರಿಸಿದೆ. ಒಂದಂತೂ ನಿಜ– ದಿಸ್ ಹ್ಯಾಪನ್ಸ್ ಓನ್ಲೀ ಇನ್ ಇಂಡಿಯಾ! ■

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65